**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ನಾಲ್ಕನೇ ಅಧಿವೇಶನ**

# ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ)(ಎರಡನೇ ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–27)**

ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ, 1956ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ಎರಡನೇ ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) 2ನೇ ಪ್ರಕರಣದ (i) ಮತ್ತು (ii)ನೇ ಖಂಡದ ಉಪಬಂಧಗಳು 01.06.2023 ಮತ್ತು 29.12.2023 ರಿಂದ ಅನುಕ್ರಮವಾಗಿ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ 4)ರ 3ನೇ ಪ್ರಕರಣದಲ್ಲಿ,-

(i) (ಇ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ-I ಹುದ್ದೆ ;

(ಇ1) ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ- II ಹುದ್ದೆ ;

(ii) (ಜಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಚ್) ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ ಹುದ್ದೆ ;

(ಐ) ಮುಖ್ಯಮಂತ್ರಿಗಳ ಸಲಹೆಗಾರರು (ನೀತಿ ಮತ್ತು ಯೋಜನೆ) ಹುದ್ದೆ; ಮತ್ತು

(ಜೆ) ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರ ಹುದ್ದೆ".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿಧಾನಸಭೆಯ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿರುವವರು, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ- I ಮತ್ತು II ಹುದ್ದೆಗೆ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ ಹುದ್ದೆಗೆ, ಮುಖ್ಯಮಂತ್ರಿಗಳ ಸಲಹೆಗಾರರು (ನೀತಿ ಮತ್ತು ಯೋಜನೆ) ಹುದ್ದೆಗೆ ಮತ್ತು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನೆ ಆಯೋಗದ ಉಪಾಧ್ಯಕ್ಷರ ಹುದ್ದೆಗೆ ನೇಮಕಗೊಳ್ಳುವುದಕ್ಕಾಗಿ ಅನರ್ಹತೆಯನ್ನು ವಿಧಿಸುವುದರಿಂದ ವಿನಾಯಿತಿಯನ್ನು ನೀಡಲು, ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ನಿವಾರಣೆ) ಅಧಿನಿಯಮ, 1956ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಚ್.ಕೆ.ಪಾಟೀಲ**
ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು
ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ
ಹಾಗೂ ಪ್ರವಾಸೋದ್ಯಮ ಮಂತ್ರಿಗಳು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 4) ಉದ್ಧೃತ ಭಾಗ

**XX XX XX**

**3. ಕೆಲವು ಅನರ್ಹತೆಗಳನ್ನು ತೆಗೆದುಹಾಕುವುದು.-** ಈ ಕೆಳಕಂಡ ಹುದ್ದೆಗಳು, ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಳ್ಳಲು ಅಥವಾ ಅದರ ಸದಸ್ಯರಾಗಲು ಅನರ್ಹಗೊಳಿಸತಕ್ಕದ್ದಲ್ಲ ಮತ್ತು ಎಂದೂ ಅನರ್ಹಗೊಳಿಸಿಲ್ಲವೆಂದು ಭಾವಿಸತಕ್ಕದ್ದು ಎಂಬುದಾಗಿ ಈ ಮೂಲಕ ಘೋಷಿಸಲಾಗಿದೆ:-

(ಎ) ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ಅಧ್ಯಕ್ಷರು, ಸಭಾಪತಿ, ಉಪಾಧ್ಯಕ್ಷರು, ಉಪಸಭಾಪತಿ, ರಾಜ್ಯ ಸಚಿವರು, ಉಪ-ಮಂತ್ರಿ, ಸಂಸದೀಯ ಕಾರ್ಯದರ್ಶಿ, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರದ ಮುಖ್ಯ ಸಚೇತಕರ ಹುದ್ದೆಗಳು.

(ಬಿ) ರಾಷ್ಟ್ರೀಯ ಯುವ ಸೇನಾದಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ ಸಂಖ್ಯೆ XXXI)ರ ಮೇರೆಗೆ ರಚಿಸಲಾದ ಮತ್ತು ನಿರ್ವಹಿಸಿಕೊಂಡು ಬಂದಿರುವ ರಾಷ್ಟ್ರೀಯ ಯುವ ಸೇನಾ ದಳದಲ್ಲಿ, ಪ್ರಾದೇಶಿಕ ಸೇನಾ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ ಸಂಖ್ಯೆ LVI)ರ ಮೇರೆಗೆ ರಚಿಸಲಾದ ಮತ್ತು ನಿರ್ವಹಿಸಿಕೊಂಡು ಬಂದಿರುವ ಪ್ರಾದೇಶಿಕ ಸೇವೆಯಲ್ಲಿ, ಮತ್ತು ಮೀಸಲು ಮತ್ತು ಸಹಾಯಕ ವಾಯು ಬಲಗಳ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ ಸಂಖ್ಯೆ LXII)ರ ಮೇರೆಗೆ ಸಹಾಯಕ ವಾಯುಬಲ ಮತ್ತು ವಾಯು ರಕ್ಷಣಾ ಮೀಸಲು ಇವುಗಳಲ್ಲಿ ಧಾರಣ ಮಾಡಿರುವ ಹುದ್ದೆಗಳು;

(ಬಿಬಿ) ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1962ರ ಮೇರೆಗೆ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯನ ಹುದ್ದೆ.

(ಬಿಬಿಬಿ) (xxx)

(ಸಿ) (xxx)

(ಸಿ1) ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 ರಡಿಯಲ್ಲಿನ ನಗರ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು.

(ಸಿ2) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 ರಡಿಯಲ್ಲಿ ರಚಿಸಲಾದ ನಗರ ಪಾಲಿಕೆಗಳ ಮಹಾಪೌರರ ಮತ್ತು ಉಪ ಮಹಾಪೌರರ ಹುದ್ದೆಗಳು.

(ಸಿ3) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಮೇರೆಗೆ ರಚಿಸಲಾದ ಜಿಲ್ಲಾ ಪಂಚಾಯತಿಗಳ, ತಾಲ್ಲೂಕ್ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು.

(ಡಿ) ಸೊಸೈಟಿಗಳ ನೋಂದಣಿಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿ ಅಡಿಯಲ್ಲಿ ನೋಂದಾಯಿಸಲಾದ ಯಾವುದೇ ಸೊಸೈಟಿಯ ಅಥವಾ ಯಾವುದೇ ಸಮಿತಿಯ (ಯಾವುದೇ ಹೆಸರಿನ ಮೂಲಕ ಕರೆಯಲಾಗಿರಲಿ) ಛೇರ್ಮನ್, ವೈಸ್-ಛೇರ್ಮನ್, ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳು, ಆಡಳಿತ ಮಂಡಳಿಯ ನಿರ್ದೇಶಕ ಅಥವಾ ಮೇಲೆ ಹೇಳಲಾದ ಹುದ್ದೆಯನ್ನು ಯಾವುದೇ ಹೆಸರಿನ ಮೂಲಕ ಕರೆಯಲಾದ ಸದಸ್ಯನ ಹುದ್ದೆ:

(ಇ) ಮುಖ್ಯ ಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹುದ್ದೆ.

(ಎಫ್) ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರ ಹುದ್ದೆ.

(ಜಿ) ನವದೆಹಲಿಯ ಕರ್ನಾಟಕ ರಾಜ್ಯ ವಿಶೇಷ ಪ್ರತಿನಿಧಿಯ ಹುದ್ದೆ.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪ್ರಿ7, ಕಾಸೂ , ಪ್ರತಿಗಳು 500, 16ನೇ ಜುಲೈ 2024

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**FOURTH SESSION**

# THE KARNATAKA LEGISLATURE (PREVENTION OF DISQUALIFICATION) (SECOND AMENDMENT) BILL, 2024

**(LA Bill No. 27 of 2024)**

A Bill further to amend the Karnataka Legislature (Prevention of Disqualification) Act, 1956.

Whereas it is expedient further to amend the Karnataka Legislature (Prevention of Disqualification) Act, 1956 (Karnataka Act 4 of 1957) for the purposes hereinafter appearing;

Be it enacted by the Karnataka State Legislature in the seventy fifth year of the Republic of India, as follows:-

**1. Short title and commencement.-** (1) This Act may be called the Karnataka Legislature (Prevention of Disqualification) (Second Amendment) Bill, 2024 .

(2) The provisions of clause (i) and (ii) of section 2 shall be deemed to have come into force with effect from 01.06.2023 and 29.12.2023 respectively.

**2. Amendment of section 3.-** In the Karnataka Legislature (Prevention of Disqualification) Act, 1956 (Karnataka Act 4 of 1957), in section 3,-

(i) for clause (e), the following shall be substituted, namely:-

“(e) Office of the Political Secretary-I to the Chief Minister;

(e1) Office of the Political Secretary-II to the Chief Minister.”

(ii) after clause (g), the following shall be inserted , namely:-

“(h) Office of the Financial Advisor to the Chief Minister;

(i) Office of Advisor (Policy and Planning) to the Chief Minister; and

(j) Office of the Deputy Chairman to the Karnataka State Policy and Planning Commission”.

## STATEMENT OF OBJECTS AND REASONS

It is considered necessary further to amend the Karnataka Legislature (Prevention of Disqualification) Act, 1956 to make provisions to exempt the Office of the Political Secretary-I and II to the Chief Minister, Office of the Financial Advisor to the Chief Minister, Office of Advisor (Policy and Planning) to the Chief Minister and Deputy Chairman to Karnataka State Policy and Planning Commission from incurring disqualification for being a Member of the Karnataka Legislative Assembly or the Member of the Karnataka Legislative Council on such appointment.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**H.K. PATIL**
Minister for Law, Justice,
Human Rights, Parliamentary Affairs
and Legislation and Tourism

**M.K. VISHALAKSHI**
Secretary
Karnataka Legislative Assembly

# ANNEXURE

## THE KARNATAKA LEGISLATURE (PREVENTION OF DISQUALIFICATION) ACT, 1956
## (KARNATAKA ACT No. 4 OF 1957)

**XXX** **XXX** **XXX**

**3. Removal of certain disqualifications.-** It is hereby declared that the following offices shall not disqualify and shall be deemed never to have disqualified, the holders thereof for being chosen as, or for being members of the Karnataka Legislative Assembly or the Karnataka Legislative Council:

(a) the offices of the Chairman, the Speaker, the Deputy Chairman, the Deputy Speaker, the Minister of State, the Deputy Minister, the Parliamentary Secretary, the leaders of the Opposition or the Government Chief Whip in the Legislative Assembly or in the Legislative Council.

(b) the offices held in the National Cadet Corps raised and maintained under the National Cadet Corps Act, 1948 (Central Act XXXI of 1948), in the Territorial Army raised and maintained under the Territorial Army Act, 1948 (Central Act LVI of 1948), and in the Auxiliary Air Forces Act, 1952 (Central Act LXII of 1952);

(bb) the office of a member of the Home Guards constituted under the Karnataka Home Guards Act, 1962;

(bbb) (xxx)

(c) (xxx)

(c1) the offices of the President and the Vice-President of a Municipal Council under the Karnataka Municipalities Act, 1964.

(c2) the Mayor or the Deputy Mayor of a Municipal Corporation constituted under the Karnataka Municipal Corporations Act, 1976.

(c3) the offices of Adhyaksha and Upadhyaksha of the Zilla Panchayats, Taluk Panchayats and Grama Panchayats constituted under the Karnataka Panchayat Raj Act, 1993.

(d) the offices of the Chairman, Vice-Chairman, President, Vice President, Director, of the Governing body or a Member by whatever name any of the aforesaid office is called, of any Committee (by whatever name called) or of any Society registered under any other law relating to registration of societies.

(e) office of the Political Secretary to the Chief Minister.

(f) Office of the Legal Advisor to the Chief Minister;

(g) Office of the Special Representative of Karnataka State at New Delhi

**XXX** **XXX** **XXX**

Govt. Press, Vikasa Soudha, Bengaluru, 16th July, 2024, P7, W.D. , Copies 500